**Order Sheet**
**In the Court Of: PRL. CIVIL JUDGE AND JMFC BELAGAVI**
**AT BELGAUM**
**F.R.No:O.S./949/2013**
**Case Reg.No: O.S./947/2013**

**Plaintiff** V E R S U S **Defendent**

---

| | |
|---|---|
| **1)Smt. Pushpa Wo. Veerappa Badiger &2 others** | **1)Shri. Bhimarao So. Irappa Sutar &7 others** |
| **2)Smt. Bharati Wo. Mohan Badiger** | **2)Smt. Anasuya Wo. Bhimarao Sutar**<br>**3)Shri. Suresh So. Bhimarao Sutar**<br>**4)Shri. Ramesh So. Bhimarao Sutar**<br>**5)Shri. Ramchandra So. Irappa Sutar**<br>**6)Shri. Kallappa So. Ningappa Patil**<br>**7)Shri. Rajaram So. Ningappa Patil** |

**ಓ.ಎಸ್ ನಂಃ ೯೪೭ ಃ 2013**

**ಪಿ. ಡಬ್ಲ್ಯೂ- 1**

ದಿ. 03-08-2017 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

ಪಾಟೀ ಸವಾಲುಃ ಶ್ರೀ. ಕೆಎಂ ಎಸ್ ೧ ಮತ್ತು ೨ ನೇ ಪ್ರತಿವಾದಿ ಪರ ವಕೀಲರಿಂದ ಃ-

ನನ್ನ ತಂದೆ ಬಿ,ಮರಾವ್ . ನನ್ನ ತಂದೆಯವರ ತಂದೆ ಈರಪ್ಪ . ಸದರಿ ಈಃರಪ್ಪ ನವರಿಗೆ 4 ಜನ ಗಂಡು ಮಕ್ಕಳು ಇದ್ದಾರೆ ಅಂದರೆ ಸರಿ. ಅನುಸೂಯ ನನ್ನ ತಾಯಿ. ನನ್ನ ತಂದೆಗೆ ಇಬ್ಬರೂ ಹೆಣ್ಣು ಮಕ್ಕಳು ಮತ್ತು ಇಬ್ಬರೂ ಗಂಡು ಮಕ್ಕಳು ಅಂದರೆ ಸರಿ. ಸದರಿಯವರಲ್ಲಿ ಹೆಣ್ಣು ಮಕ್ಕಳು ಅಂದರೆ ಪುಷ್ಪ ಮತ್ತು ಭಾರತಿ . ಗಂಡು ಮಕ್ಕಳು ಸುರೇಶ ಮತ್ತು ರಮೇಶ ಅಂದರೆ ಸರಿ. ನನ್ನ ತಂದೆ ಮತ್ತು 5 ನೇ ಪ್ರತಿವಾದಿಯವರ ನಡುವೆ 1992 ರಲ್ಲಿ ಪಾಲು ವಿಭಾಗ ಆಗಿದೆ ಅಂದರೆ ಸರಿ. ಸದರಿ ಪಾಲು

ಪಡೆದುಕೊಂಡ ನಂತರ ನನ್ನ ತಂದೆ ಮತ್ತು 5 ನೇ ಪ್ರತಿವಾದಿಯವರು ತಮ್ಮ ತಮ್ಮ ಹಿಸ್ಸೆಯಲ್ಲಿ ಬೇರೆ ಬೇರೆಯಾಗಿ ವಾಸವಾಗಿದ್ದರು ಅಂದರೆ ಸರಿ. ಸರ್ವೆ ನಂ .14ಃ7 ಮಾತ್ರ ನನ್ನ ತಂದೆ 5 ನೇ ಪ್ರತಿವಾದಿಯವರ ಜಂಟಿ ಹೆಸರಿನಲ್ಲಿದೆ ಅಂದರೆ ಸರಿ. 6 ನೇ ಮತ್ತು 7 ನೇ ಪ್ರತಿವಾದಿಯವರು ಅಣ್ಣ ತಮ್ಮಂದಿರು ಅಂದರೆ ಸರಿ. ಸರ್ವೆ ನಂ.20ಃ14 , 20ಃ20 ಸದರಿ 6 ನೇ ಮತ್ತು 7 ನೇ ಪ್ರತಿವಾದಿಯವರ ಜಂಟಿ ಹೆಸರಿನಲ್ಲಿದೆ ಅಂದರೆ ಸರಿ. ನನ್ನ ತಂದೆ ಮತ್ತು ಅವರ 3 ಜನ ಅಣ್ಣತಮ್ಮಂದಿರಲ್ಲಿ 5 , 8 ಮತ್ತು 9 ಪ್ರತಿವಾದಿಗಳಲ್ಲಿ 1992 ರಲ್ಲಿ ಲಿಖಿತ ಪಾಲು ವಿಭಾಗವಾಗಿತ್ತು ಅಂದರೆ ಸರಿ. ಸದರಿ ಲಿಖಿತ ಪಾಲು ವಿಭಾಗಕ್ಕೆ ಸದರಿ 4 ಜನ ಸೇರಿ ದಿನಾಂಕ 02-07-1992 ರಲ್ಲಿ ಸುಮತಿ ಪಾಟೀಲ ನೋಟರಿ ಇವರ ಮುಂದೆ ಬರೆದಿರುತ್ತಾರೆ ಅಂದರೆ ಸರಿ. ಸದರಿ ಲಿಖಿತ ಪಾಲು ವಿಭಾಗ ಪತ್ರಕ್ಕೆ ಡೈರಿ ನಂ 986 ರಲ್ಲಿ ನಮೂದಾಗಿರುತ್ತದೆ ಅಂದರೆ ಸರಿ.

2. ಪಾಟ್ನಿ ಪತ್ರ ಪ್ರಕಾರ ದಿ.30-05-1992 ಸರ್ವೆ ನಂ.14ಃ 2 , 20ಃ2 , ಮತ್ತು 20ಃ14 3 ಆಸ್ತಿಗಳನ್ನು ನನ್ನ ತಂದೆ 5 ನೇ ಪ್ರತಿವಾದಿಯವರಿಗೆ ಜಂಟಿಯಾಗಿ ನೀಡುತ್ತಾರೆ ಅಂದರೆ ಸರಿ. ಸದರಿ ವಾಟ್ನಿ ಪತ್ರದ ಪ್ರಕಾರ ಸರ್ವೆ 13ಃ1 , 20ಃ15 , 20ಃ19 86ಃ12 ಮತ್ತು 86ಃ19 ಸದರಿ 5 ಸರ್ವೆ ನಂಬರಗಳು ನನ್ನ ತಂದೆಯವರಿಗೆ ನೀಡಿರುತ್ತಾರೆ ಅಂದರೆ ಸರಿ. 8 ಮತ್ತು 9 ನೇ ಪ್ರತಿವಾದಿಗಳು ವಾಟ್ನಿ ಪತ್ರದಲ್ಲಿ ಆಸ್ತಿಗಳು ಬಿಡುಗಡೆಗೊಳಿಸಿದ ಕಾರಣ ಅಸ್ತಿಗಳಲ್ಲಿ ಸದರಿಯವರಿಗೆ ಪಾಲು ಬಂದಿರುವುದಿಲ್ಲ ಅಂದರೆ ಸರಿಯಲ್ಲ . ಸದರಿ ವಾಟ್ನಿ ಪತ್ರ ದ ಪ್ರಕಾರ ಆರ್ ಟಿ ಸಿ 1 ನೇ ಮತ್ತು 2 ನೇ ಪ್ರತಿವಾದಿಯವರ ಹೆಸರು ನಮುದಾಗಿರುತ್ತದೆ ಅಂದರೆ ಸರಿ. 8 ನೇ ಪ್ರತಿವಾದಿ ಸದರಿ ವಾಟ್ನಿ ಪತ್ರ ಗಳನ್ನು ಪ್ರಶ್ನಿಸಿ ಅಪೀಲು ನಂ .91ಃ2006 ಸಲ್ಲಿಸಿರುತ್ತಾರೆ ಅಂದರೆ ಸರಿ. ಸದರಿ ಅಪೀಲು ರದ್ದುಗೊಂಡಿರುತ್ತದೆ ಅಂದರೆ ಸರಿ. ಸದರಿ ಅಪೀಲನ್ನು ಪ್ರಶ್ನಿಸಿ 8 ನೇ ಪ್ರತಿವಾದಿ ಆರ್ ವಿ ಃ ಆರ್ ಟಿ ಎಸ್ ಃ 246ಃ2006-2007 ಸಲ್ಲಿಸಿರುತ್ತಾರೆ

ಅಂದರೆ ಸರಿ.  ಸದರಿ ಅಪೀಲು ದಿನಾಂಕ 18-11-2010 ರಲ್ಲಿ ಸಹ ರದ್ದಾಗಿರುತ್ತದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ಸಾಕ್ಷಿಯ ಹೇಳಿ ಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖ ನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ.

೩ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.